ಅ) ಈ ಮೊತ್ತವನ್ನು ಪಾವತಿಸಲು ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ಚರ್ಚಿಸಿ ಕಾರ್ಯಸೂಚಿ ಮಂಡಿಸಲಾಗಿ ಸರ್ಕಾರದ ಆದೇಶ ನಿರೀಕ್ಷೆಯ ಮೇರೆಗೆ 31.07.2000ದ ವರೆವಿಗೆ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಯವರು ಆದೇಶ ನೀಡಿದರೂ ಅನುಷ್ಠಾನಾಧಿಕಾರಿಗಳು ಖರ್ಚು ಮಾಡಿರುವುದಿಲ್ಲ. ಸದರಿ ಬಿಲ್ಲನ್ನು ಪಾವತಿಸಲು ಸರ್ಕಾರದಿಂದ ಹೊಸದಾಗಿಯೇ ಮಂಜೂರಾತಿ ದೊರೆಯಬೇಕೇ ಹೊರತು ಒಂದು ಆರ್ಥಿಕ ವರ್ಷದಲ್ಲಿ ಖರ್ಚುಮಾಡಲು ಬಿಡುಗಡೆಯಾದ ಅನುದಾನ ಬಳಕೆಯಾಗದೇ ಇದ್ದಲ್ಲಿ ಮುಂದಿನ ವರ್ಷಕ್ಕೆ ಪಾವತಿಸಲು ನಿಯಮ ಪ್ರಕಾರ ಅವಕಾಶ ಇರುವುದಿಲ್ಲ.

ಇ) ಈ ಬಗ್ಗೆ ಉಪನಿರ್ದೇಶಕರಿಂದ ಜಿಲ್ಲಾ ಪಂಚಾಯತ್ ಮೂಲಕ ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಯನ್ನು (ಸಮಂಜಸವಾದ ಕಾರಣಗಳೊಂದಿಗೆ) ಸಿದ್ದಪಡಿಸಿ ವ್ಯಪಗತವಾದ ಮೊತ್ತದಷ್ಟು ಅನುದಾನವನ್ನು ಬಿಡುಗಡೆಗೊಳಿಸಲು ಕೋರಿದಲ್ಲಿ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಅನುದಾನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆಯನ್ನು ಪರಿಶೀಲಿಸುವುದು.

ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1396ಕ್ಕೆ ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕುವಾರು ವ್ಯಪಗತವಾಗಿರುವ ಅನುದಾನ ವಿವರ

(ರೂ. ಲಕ್ಷಗಳಲ್ಲಿ)

ತಾಲ್ಲೂಕು	1998-99	1999-2000	2000-2001	ಒಟ್ಟು
ಬಂಟ್ವಾಳ	-	5.83	-	5.83
ಬೆಳ್ತಂಗಡಿ	-	2.50	-	2.50
ಮಂಗಳೂರು ತಾ	-	3.18	-	3.18
ಮಂಗಳೂರು ನಗರ	-	2.55	-	2.55
ಮೂಡಬಿದರೆ	-	1.04	-	1.04
ಪುತ್ತೂರು	2.84	0.74	-	3.54
ಸೂಳ್ಯ	-	3.62	-	3.62
ಒಟ್ಟು	2.84	19.46	-	22.30

ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆ

1265(1230) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯ ಮೂಲಕ ಕುಡಿಯುವ ನೀರಿನ ಸೌಲಭ್ಯವನ್ನು ಬಾಗೇಪಲ್ಲಿ, ಗುಡಿಬಂಡೆ ಪಟ್ಟಣ ತಾಲ್ಲೂಕುಗಳಲ್ಲಿ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಆ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿರುವ ನಾಗರೀಕರಿಗೆ ಹಳ್ಳಿಗಾಡು ಜನರು ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗಿರುವ ನೀರನ್ನೇ ಬಳಸುತ್ತಿದ್ದು ಇದರಿಂದ ವಿವಿಧ ಕಾಯಿಲೆಯಿಂದ ಜನತೆಯು ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗಿದ್ದು ಇದನ್ನೇ ಕುಡಿಯಲು ಬಳಸುತ್ತಿರುವ ಜನತೆಗೆ ಉತ್ತಮ ನೀರಿನ ಕುಡಿಯುವ ಸೌಲಭ್ಯವನ್ನು ಒದಗಿಸಿಕೊಟ್ಟು ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) :

ಅ) ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣಗಳಿಗೆ ಹಾಗೂ ಬಾಗೇಪಲ್ಲಿ ತಾಲ್ಲೂಕಿನ ಪರಗೋಡು ಮತ್ತು ಇತರ 100 ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಪರಗೋಡು ಗ್ರಾಮದ ಹತ್ತಿರ ಚಿತ್ರಾವತಿ ನದಿಗೆ ಅಡ್ಡವಾಗಿ ಹೊಸ ಕೆರೆಯನ್ನು ನಿರ್ಮಿಸಲು ಉದ್ದೇಶಿಸಿದೆ. ಸಬ್-ಮಿಷನ್ ಕಾರ್ಯಕ್ರಮದಡಿ ಪ್ರಸ್ತಾವಿತ ಕೆರೆಯಿಂದ ಪರಗೋಡು ಮತ್ತು ಇತರ 100 ಗ್ರಾಮಗಳಿಗೆ ನೀರು ಸರಬರಾಜು ಯೋಜನೆಯ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಪರಿಕಲ್ಪಿತ ವಿನ್ಯಾಸ ವರದಿಯ ಪ್ರಕಾರ ಈ ಯೋಜನೆಯ ಅಂದಾಜು ಮೊತ್ತ ಸುಮಾರು ರೂ. 13.22 ಕೋಟಿಗಳು.

ಆ) ಬಾಗೇಪಲ್ಲಿ ಕ್ಷೇತ್ರದಲ್ಲಿ ಕೆಲವು ಜನರು ಫ್ಲೂರೋಸಿಸ್ ಕಾಯಿಲೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಕುಡಿಯುವ ನೀರಿನಲ್ಲಿ ಗುಣಮಟ್ಟ, ಸಮಸ್ಯೆಯಿರುವ ಗ್ರಾಮಗಳಿಗೆ ಮೇಲ್ಮೈ ಮೂಲಗಳಿಂದ : ದೂರದ ಕೊಳವೆ ಬಾವಿಗಳಿಂದ : ಶುದ್ದೀಕರಣ ಘಟಕಗಳ ಮುಖಾಂತರ ಸುರಕ್ಷಿತ ಕುಡಿಯುವ ನೀರಿನ ಯೋಜನೆಗಳನ್ನು ಅನುದಾನ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪರಿಶಿಷ್ಟ ಜಾತಿ / ವರ್ಗಗಳ ಜನವಾಸಿಸುವ ಕಡೆ ಟಿ.ವಿ ನೀಡುವುದು

1267 (1571) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದೆ ಜಾರಿಯಲ್ಲಿದ್ದ ಪರಿಶಿಷ್ಟ ಜಾತಿ : ವರ್ಗಗಳ ಜನ ವಾಸಿಸುವ ಕಾಲೋನಿಗಳಿಗೆ ಬಣ್ಣದ ಟಿ.ವಿ. ಒದಗಿಸುವ ಯೋಜನೆ ಸ್ಥಗಿತಗೊಳಿಸಲು ಕಾರಣಗಳೇನು?

ಆ) ಮತ್ತೆ ಈ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಇ) ಹೌದಾದಲ್ಲಿ ಯಾವಾಗ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು) :

ಅ) 1996-97ನೇ ಸಾಲಿನವರೆವಿಗೂ ವಿಶೇಷ ಘಟಕ ಯೋಜನೆಯಡಿ ಬಿಡುಗಡೆಯಾಗುತ್ತಿದ್ದ ಅನುದಾನದಲ್ಲಿ ಎಲ್ಲಾ ಶಾಸಕರ ಕ್ಷೇತ್ರದ ಪರಿಶಿಷ್ಟ ಜಾತಿ ಜನರ ಕಾಲೋನಿಗಳಲ್ಲಿ ದೂರದರ್ಶನ ಸೆಟ್ಟುಗಳನ್ನು ಅಳವಡಿಸಲಾಗುತ್ತಿತ್ತು. ಈ ಯೋಜನೆಯಡಿಯ ಅನುದಾನವನ್ನು ಸರ್ಕಾರದ ಮಟ್ಟದಲ್ಲಿ ಕ್ರೋಢೀಕರಿಸಲು ನಿರ್ಧರಿಸಿದ ಕಾರಣ ಈ ಯೋಜನೆಯನ್ನು ಇಲಾಖೆಯಲ್ಲಿ ಸ್ಥಗಿತಗೊಳಿಸಲಾಗಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.